'ಸಾಧನೆ' ಎಂದೊಡನೆ ನನ್ನ ಕಿವಿ ಚುರುಕಾಯ್ತು. ಆಟೋಗ್ರಾಫ್ ಹಿಡಿದು ಗುಂಡನ ಮನೆಗೆ ಹೋದೆ.

ಅವನು ಗೋಡೆಕಡೆ ಮುಖಮಾಡಿ ಮಂಡಿಗೆ ಮುಖವಿಟ್ಟು ಕಣ್ಣುಮುಚ್ಚಿ ಕುಳಿತಿದ್ದ.

'ನಿನ್ನ ಆಟೋಗ್ರಾಫ್ ಕೊಡೋ.'

'ಹೋಗೇ ಅತ್ಲಾಗೆ, ಆಟೋಗ್ರಾಫ್ ಒಂದು ಕಮ್ಮಿಯಾಗಿತ್ತು ನಂಗೆ. ನಾನೇನಂಥ ಸಾಧನೆ ಮಾಡಿರೋದು?' ಸಿಡುಕಿದ.

'ಸಾಧನೆ ಅಲ್ವಾ ಮತ್ತೆ? ಒಂದೇ ಪರೀಕ್ಷೇಲಿ ಎಂಟುಸಲ ಫೇಲಾಗಿದೀಯಂತೆ! ಕೊಡೋ ಆಟೋಗ್ರಾಫು' ಎಂದು ದುಂಬಾಲು ಬಿದ್ದೆ. ಬೆನ್ನಿಗೆರಡು ಬಾರಿಸಿ ಹೊರದಬ್ಬಿ ಬಾಗಿಲು ಜಡಿದುಕೊಂಡ.

ಈ ಸಾಧಕರ ಸಮಾಚಾರವೇ ಬೇಡವೆಂದು ಶ್ರಮಜೀವಿಗಳತ್ತ ಗಮನ ಹರಿಸಿದೆ. ಆಗ ಕಣ್ಣಿಗೆ ಬಿದ್ದಿದ್ದು ಬೀದಿ ಗುಡಿಸುವ ಬೀರಮ್ಮ. ದಿನ ಪೂರ್ತಿ ಕಸಗುಡಿಸಿ ಗುಡಿಸಿ ಬೆನ್ನು ಶಾಶ್ವತವಾಗಿ ಬಾಗಿತ್ತು. ಪುಸ್ತಕ ಪೆನ್ನು ಅವಳ ಮುಂದೆ ಹಿಡಿದೆ. ಎಲೆ ಅಡಿಕೆ ತಂಬಾಕು ಜಗಿದುಜಗಿದು ಶಾಶ್ವತವಾಗಿ ಕಪ್ಪಾಗಿದ್ದ ಹಲ್ಲನ್ನು ಆ ಕಿವಿ ಇಂದ ಈ ಕಿವಿಯವರೆಗೆ ಅರಳಿಸಿದಳು. 'ನಾನೇನು ನಿಮ್ಮಂಗೆ ಇಸ್ಕೂಲ್ನಾಗೆ ಓದಿವ್ನಾ? ನಂಗೆ ಬರ್ಯಾಕ್ಕೆ ಬರಾಕಿಲ್ಲ' ಎಂದಳು. ಅವಳ ಹೆಬ್ಬೆರಳ ಗುರುತೇ ನನ್ನ ಆಟೋಗ್ರಾಫ್‌ಗೆ ಬೋಣಿಯಾಯಿತು.

ಆಸ್ಟ್ರೇಲಿಯಾ ಕ್ರಿಕೆಟ್ ತಂಡ ಭಾರತಕ್ಕೆ ಬಂದು ನಮ್ಮೂರಿನಲ್ಲಿ ಆಡಲಿತ್ತು. ನನ್ನಣ್ಣ ಗೆಳೆಯರೊಂದಿಗೆ ಮ್ಯಾಚ್ ನೋಡಲು ಹೊರಟ. ಕ್ರಿಕೆಟ್ ವೀರರ ಆಟೋಗ್ರಾಫ್ ಪಡೆಯಲು ಇದಕ್ಕಿಂತ ಒಳ್ಳೆಯ ಸುವರ್ಣಾವಕಾಶ ಎಲ್ಲಿ ದೊರಕೀತು? 'ಲೋ ನನ್ನನ್ನೂ ಮ್ಯಾಚ್ ನೋಡಲು ಕರ್ಕೊಂಡು ಹೋಗೋ' ಬೇಡಿದೆ. 'ಹೋಗ್ಹೋಗೇ. ನಿನ್ನ ಜೊತೆ ಹೋದ್ರೆ ಹೆಣ್ಣಿಗ ಸುಬ್ಬ ಅಂತಾರೆ. ಹೆಣ್ಮಕ್ಳಿಗೆ ಯಾಕೇ ಕ್ರಿಕೆಟ್ಟು? ಸುಮ್ನೆ ಕೂತ್ಕೊಂಡು ಚೌಕಾ ಬಾರಾನೋ ಕುಂಟೆ ಬಿಲ್ಲೇನೋ ಆಡ್ಕೋಳೀ' ಎಂದು ಹೇಳಿ ನನ್ನ ಸ್ತ್ರೀಶಕ್ತಿ ಬಡಿದೆಬ್ಬಿಸಿದ. ನೇರ ಹೋಗಿ ಅಪ್ಪನ ಬಳಿ ಅವನು ಹೇಳಿದ್ದಕ್ಕೆ ಉಪ್ಪು ಖಾರ ಸವರಿ ಒಗ್ಗರಣೆ ಹಾಕಿ ಚಾಡಿ ಹೇಳಿದೆ. 'ಅವ್ಳನ್ನೂ ಕರ್ಕೊಂಡು ಹೋದ್ರೆ ಉಂಟು ಇಲ್ದಿದ್ರೆ ನಿಂಗೂ ಕಾಸು ಕೊಡೊಲ್ಲ' ಅಪ್ಪ ಕಟ್ಟುನಿಟ್ಟಾಗಿ ಹೇಳಿಬಿಟ್ಟರು.

ಮ್ಯಾಚಿನ ದಿನ ಅಣ್ಣನ ಜೊತೆ ಬಸ್ಸಿನಿಂದಿಳಿದು ಸ್ಟೇಡಿಯಂ ತಲಪುತ್ತಿದ್ದಂತೆ, 'ಇಲ್ಲಿಂದ ಮುಂದಕ್ಕೆ ನೀನು ಒಬ್ಳೇ ಹೋಗೇ. ನನ್ಜೊತೆ ಎಲ್ಲಾದ್ರೂ ಬಂದ್ಗಿಂದೀ. ನಾನು ನನ್ನ ಫ್ರೆಂಡುಗ್ಳ ಜೊತೆ ಕೂತ್ಕೋತೀನಿ. ನೀನು ಬೇರೆ ಕೂತ್ಕೋ. ಸಂಜೆ ಒಟ್ಟಿಗೆ ಮನೇಗೆ ಹೋಗೋಣ' ಎಂದು ಮುಂದೆ ಹೊಗಿಬಿಟ್ಟ.

ಮ್ಯಾಚ್ ಆರಂಭವಾಯ್ತು. ನನಗೋ ಆಟೋಗ್ರಾಫಿನದೇ ಧ್ಯಾನ. ನಾನೇ ಹೋಗಿ ಆಟಗಾರರನ್ನು ಆಟೋಗ್ರಾಫ್ ಕೇಳಲು ಆಗದಂತೆ ಎಲ್ಲೆಲ್ಲೂ ಪೊಲೀಸರ ಕಾವಲು. ಅವರ ಕೈತಪ್ಪಿಸಿ ಪಿಚ್ ಕಡೆಗೆ ಓಡಬೇಕಿತ್ತು. ಓಡಲು ನಾನಂದು ಹಾಕಿದ್ದು ಉದ್ದನೆ ಲಂಗ ಚೋಲಿ. ಅದು ಓಡಲು ಹೇಳಿ ಮಾಡಿಸಿದ್ದಲ್ಲ. ಆದರೆ ನನಗಂದು ಹೇಗಾದರೂ ಆಟೋಗ್ರಾಫ್ ಬೇಕೇಬೇಕಿತ್ತು. ಬೇರೆ ದಾರಿ ತೋರದೆ ಅಣ್ಣನ ಬಳಿ ಹೋದೆ. 'ನನಗೆ ಒಬ್ಬ ಕ್ರಿಕೆಟ್ಟಿಗನ ಆಟೋಗ್ರಾಫಾದರೂ ತಂದುಕೊಡೋ' ಗಿಂಜಿದೆ. ಅವನಿಗೆ ಅಂದು ತನ್ನ ಗೆಳೆಯರ ಮುಂದೆ ತನ್ನ ಪ್ರತಾಪ ತೋರಿಸಿಕೊಳ್ಳುವ ಇರಾದೆ ಇತ್ತೇನೊ. ರೇಗದೆ ಬುಕ್ಕು ತೆಗೆದುಕೊಂಡು, 'ನೀನು ಹೋಗಿ ನಿನ್ನ ಸೀಟಿನಲ್ಲಿ ಕುಳಿತುಕೊ. ನಾನು ಹೇಗಾದರೂ ಮಾಡಿ ತಂದುಕೊಡುತ್ತೀನಿ' ಎಂದ ಜಂಭದಿಂದ!